87275

## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 06 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಸ್.ವಿ.ಸಂಕನೂರ(ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 12.09.2022 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿರುವ BIMS, KIMS, GIMS, VIMS, ಮುಂತಾದ ಆಟೋನಾಮಸ್ ಶುಶ್ರೂತ ಮಹಾವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರು/ ಟ್ಯೂಟರ್ಸ್ ಇವರಿಗಾಗಿ ಸಿ & ಆರ್ ನಿಯಮಾವಳಿಗಳನ್ನು ರೂಪಿಸಲಾಗಿದೆಯೇ; (ರೂಪಿಸಿದ್ದಲ್ಲಿ ಸಿ & ಆರ್ ನಿಯಮಾವಳಿಯ ಸಂಪೂರ್ಣ ಮಾಹಿತಿ ನೀಡುವುದು). | ರಾಜ್ಯದಲ್ಲಿರುವ ವೈದ್ಯಕೀಯ ಶಿಕ್ಷಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶುಶ್ರೂತ ಮಹಾವಿದ್ಯಾಲಯಗಳು ಶಾಶ್ವತ ಅನುದಾನರಹಿತ ಕೋರ್ಸ್‌ಗಳಾಗಿರುವುದರಿಂದ, ಯಾವುದೇ ಹುದ್ದೆಗಳನ್ನು ಸೃಜಿಸಿರುವುದಿಲ್ಲ. ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ಕಾರ್ಯನಿರತ ಶುಶ್ರೂತಾಧಿಕಾರಿಗಳು ಹೊಂದಿರುವ ಸ್ನಾತಕೋತ್ತರ ವ್ಯಾಸಂಗದ ಆಧಾರದ ಮೇಲೆ ಸದರಿ ಶುಶ್ರೂತಾ ಮಹಾವಿದ್ಯಾಲಯಗಳಲ್ಲಿ ಉಪನ್ಯಾಸಕರಾಗಿ ಸರದಿ ಕ್ರಮದಲ್ಲಿ ನಿಯೋಜಿಸಲಾಗುತ್ತಿದೆ. ಆದ್ದರಿಂದ ಸಿ& ಆರ್ ನಿಯಮಾವಳಿಗಳನ್ನು ರೂಪಿಸುವ ಪ್ರಮೇಯ ಉದ್ಭವಿಸುವುದಿಲ್ಲ. |
| ಆ) | ಈ ಶುಶ್ರೂತ ಮಹಾವಿದ್ಯಾಲಯಗಳಲ್ಲಿ ನಿಯಮಾನುಸಾರ ಹುದ್ದೆ ಸೃಷ್ಟಿಸಿ ನೇಮಕಾತಿ ಮಾಡಿಕೊಳ್ಳಲಾಗಿದೆಯೇ ? (ವಿವರ ನೀಡುವುದು) | |
| ಇ) | ಶುಶ್ರೂತ ಶಾಲಾ ಹಾಗೂ ಮಹಾವಿದ್ಯಾಲಯಗಳಲ್ಲಿ ನೇಮಕಗೊಂಡ ಉಪನ್ಯಾಸಕ/ ಟ್ಯೂಟರ್ಸ್ ಇವರುಗಳಿಗೆ ಕೆ.ಜಿ.ಐ.ಡಿ ಸೌಲಭ್ಯ ನೀಡಲಾಗಿದೆಯೇ ಇಲ್ಲದಿದ್ದಲ್ಲಿ ಸದರಿ ಸೌಲಭ್ಯ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವೈದ್ಯಕೀಯ ಮಹಾವಿದ್ಯಾಲಯಗಳು ಸ್ವಾಯತ್ತ ಸಂಸ್ಥೆಗಳಾಗಿರುತ್ತವೆ. ಈ ಸ್ವಾಯತ್ತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು "ಸರ್ಕಾರಿ ನೌಕರ" ಎಂಬ ಪದದ ವ್ಯಾಪ್ತಿಯಡಿ ಒಳಪಡುವುದಿಲ್ಲ. ಆದ್ದರಿಂದ ಕೆ.ಜಿ.ಐ.ಡಿ ಸೌಲಭ್ಯವನ್ನು ವಿಸ್ತರಿಸಿರುವುದಿಲ್ಲ. |
| ಈ) | ಈ ಶುಶ್ರೂತ ಶಾಲಾ ಹಾಗೂ ಮಹಾವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನರ್ಸಿಂಗ್ ಆಫೀಸರ್ (ಉಪನ್ಯಾಸಕ/ ಟ್ಯೂಟರ್‌ಗಳು ಕೋವಿಡ್ ಅವಧಿಯಲ್ಲಿ ಕಾರ್ಯನಿರ್ವಹಿಸಿದ್ದು ಇವರುಗಳಿಗೆ ಅಲೋವೆನ್ಸ್ (ಅಪಾಯ ಭತ್ಯೆ) ನೀಡಲಾಗಿದೆಯೇ; ನೀಡಿಲ್ಲದಿದ್ದಲ್ಲಿ ಸದರಿ ರಿಸ್ಕ್ ಅಲೋವೆನ್ಸ್ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಕೋವಿಡ್ ವಾರ್ಡ್‌ಗಳಲ್ಲಿ ಪಿಪಿಇ ಕಿಟ್ ಧರಿಸಿ ಕೋವಿಡ್ ರೋಗಿಗಳಿಗೆ ಶುಶ್ರೂಷೆ ನೀಡಿರುವ ನರ್ಸಿಂಗ್ ಆಫೀಸರ್‌ಗಳಿಗೆ ಕೋವಿಡ್ ಭತ್ಯೆ ನೀಡಲಾಗಿದೆ. |

ಸಂಖ್ಯೆ: ಎಂಇಡಿ 421 ಎಂಪಿಎಸ್ 2022

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು.



Generated from eOffice by DR.K SUDHAKAR, MED-MIN(SK), MINISTER, MEDICAL EDUCATION SEC on 08/09/2022 03:46 PM